**OS 30/2022 PW1**

**ದಿನಾಂಕಃ 22 /08/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಶ್ರೀಮತಿ ಆರ್ ಎಸ್ ಎಸ್ ವಕೀಲರಿಂದ 2 ನೇ ಪ್ರತಿವಾದಿಯ ಪರವಾಗಿ**

_ಉಮಾ ನನ್ನ ಪತ್ನಿ. ನನ್ನ ಪತ್ನಿ ಹಾಗೂ 1 ನೇ ಪ್ರತಿವಾದಿ ಖಾತೆ ಅದಲು ಬದಲಿಗೆ ಅರ್ಜಿಯನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿಃ17.08.2006 ರಲ್ಲಿ ಆ ರೀತಿ ಇಬ್ಬರು ಅರ್ಜಿಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪತ್ನಿ ಹಾಗೂ 1 ನೇ ಪ್ರತಿವಾದಿಯ ಸಮ್ಮತಿ ಮೇರೆಗೆ 2 ನೇ ಪ್ರತಿವಾದಿ ಖಾತೆ ಅದಲು ಬದಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವರಿಬ್ಬರ ಸಮ್ಮತಿ ಮೇರೆಗೆ ಖಾತೆ ಮಾಡಿದ್ದರೂ ಕೂಡಾ 2 ನೇ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಷತ್ರಿ ಹಾಗೂ 1 ನೇ ಪ್ರತಿವಾದಿ ನೀಡಿರುವ ಅರ್ಜಿಗಳು ಪಂಚಾಯಿತಿಯಲ್ಲಿ ಈಗಲೂ ಇದ್ದು ಆ ಪ್ರಕಾರ ನಡವಳಿ ಕೂಡಾ ಆಗಿದ್ದು ಸದರಿ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸಮ್ಮತಿ ಮೇರೆಗೆ ಖಾತೆ ಮಾಡಿರುವ ವಿಚಾರ ನನಗೆ ಗೊತ್ತಿದ್ದರೂ ಕೂಡಾ ದಾವಾ ಅನುಸೂಚಿ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಇಬ್ಬರ ಸಮ್ಮತಿಯ ಮೇರೆಗೆ ದಿಃ 21.10.2020 ರಂದು ಖಾತೆ ಅದಲು ಬದಲು ಆಗಿರುತ್ತದೆ ಎಂದರೆ ಸರಿಯಲ್ಲ. ನೀವು ನಿಮ್ಮ ಪತ್ನಿಗೆ ಒಪ್ಪಿಗೆ ಕೊಟ್ಟಿದ್ದು ನಿಮಗೆ ಸದರಿ ವಿಚಾರವು ಗೊತ್ತಿದ್ದರೂ ಈಗ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ನಾನು ನನ್ನ ಪತ್ನಿಗೆ ಆ ರೀತಿ ಸಮ್ಮತಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಸಮ್ಮತಿ ಮೇರೆಗೆ ಅದಲು ಬದಲು ಮಾಡಿಕೊಂಡಿರುವ ನಿವೇಶನಗಳ ಸಂಖ್ಯೆಃ 312 ಹಾಗೂ 349 ಎಂದರೆ ಸಾಕ್ಷಿಯು ನಾವು ಯಾವುದೇ ನಿವೇಶನವನ್ನು ಅದಲು ಬದಲು ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಅರ್ಜಿ ಕೊಟ್ಟ ಮೇರೆಗೆ 2 ನೇ ಪ್ರತಿವಾದಿ ಸದರಿ ಅರ್ಜಿಯನ್ನು ಮೀಟ್ಂಗ್ ನಲ್ಲಿ ಇಟ್ಟು ರೆಸ್ಯೂಲ್ಯೂಶನ್ ಮಾಡಿ ನಂತರ

ಖಾತೆ ಮಾಡಿರುವುದು ಎಂದರೆ ಸರಿಯಲ್ಲ. ಆ ರೀತಿ ಖಾತೆ ಬದಲಾವಣೆ ಮಾಡಿದ ನಂತರವೇ 2 ನೇ ವಾದಿಗೆ ನೀವು ಮರಣ ಶಾಸನ ಪತ್ರ ಮಾಡಿರುವುದು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಮರಣ ಶಾಸನ ಪತ್ರದ ಆಧಾರದ ಮೇರೆಗೆ ಖಾತೆ ಬದಲಾವಣೆ ಮಾಡುವಂತೆ ನಾನು ಅರ್ಜಿ ಕೊಟ್ಟಿದ್ದು ಆ ಸಮಯದಲ್ಲಿ 2 ನೇ ಪ್ರತಿವಾದಿ ಖಾತೆ ಬದಲಾವಣೆ ಮಾಡಲು ಬರುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಯ ಯಾವುದೇ ಪಾತ್ರ ಇಲ್ಲದೇ ಇದ್ದರೂ ಅವರನ್ನು ಅನಾವಶ್ಯಕವಾಗಿ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

(ಚೇತನಾ )
2 ನೇ ಅಪರ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಭದ್ರಾವತಿ.